# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1727** |
| ಸದಸ್ಯರ ಹೆಸರು | : | ಶ್ರೀ ಸಿ.ಟಿ.ರವಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-03-2026 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| ಅ) | ಪಿಎಂ. ಕುಸುಮ್(ಬಿ) ಮತ್ತು ಕುಸುಮ್ - ಸಿ ಯೋಜನೆಯ ಉದ್ದೇಶವೇನು; ಯೋಜನೆಯಲ್ಲಿ ಆಗಿರುವ ಪ್ರಗತಿ ಏನು; | • **ಪಿ.ಎಂ ಕುಸುಮ್ ಬಿ ಯೋಜನೆಯ ಉದ್ದೇಶ:** ಪಿ.ಎಂ ಕುಸುಮ್ - ಬಿ ಯೋಜನೆಯಡಿ ಜಾಲಮುಕ್ತ ಸೌರ ಪಂಪ್ ಸೆಟ್ ಗಳನ್ನು ಅಳವಡಿಸಿ, ಹಗಲಿನ ವೇಳೆಯೇ ಕೃಷಿ ಚಟುವಟಿಕೆಗಳನ್ನು ಕೈಗೊಂಡು ಗ್ರಿಡ್ ಸಂಪರ್ಕಿತ ವಿದ್ಯುತ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದಾಗಿರುತ್ತದೆ.<br><br>ಸದರಿ ಯೋಜನೆಯಡಿ 7.5HP ಸಾಮರ್ಥ್ಯಕ್ಕಿಂತ ಹೆಚ್ಚಿನ ಸೌರ ಪಂಪ್ ಸೆಟ್ ಗಳನ್ನು ಅಳವಡಿಸಿಕೊಳ್ಳಬಹುದಾಗಿದ್ದು, ಸಹಾಯಧನವನ್ನು ಮಾತ್ರ 7.5HP ಸಾಮರ್ಥ್ಯಕ್ಕೆ ಸೀಮಿತಗೊಳಿಸಲಾಗಿದೆ. ಕೇಂದ್ರ ಸರ್ಕಾರದಿಂದ ಶೇ.30ರಷ್ಟು, ರಾಜ್ಯ ಸರ್ಕಾರದಿಂದ ಶೇ. 50 ರಷ್ಟು (ಶೇ. 30 ರಿಂದ ಶೇ. 50 ಕ್ಕೆ ಹೆಚ್ಚಿಸಲಾಗಿದೆ) ಮತ್ತು ಉಳಿದ ಶೇ. 20ರಷ್ಟು ವಂತಿಗೆಯನ್ನು ರೈತರಿಂದ ಭರಿಸಿ ಅನುಷ್ಠಾನಗೊಳಿಸಲಾಗುತ್ತಿದೆ.<br><br>ಸದರಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಈವರೆಗೆ 56,000 ಪಂಪ್ ಸೆಟ್ ಗಳು ಹಂಚಿಕೆಯಾಗಿದ್ದು, ದಿನಾಂಕ: 28.02.2026 ರ ಅಂತ್ಯಕ್ಕೆ 5533 ಸಂಖ್ಯೆ ಸೌರಪಂಪ್ ಸೆಟ್‌ಗಳನ್ನು ಅಳವಡಿಸಿ ಅನುಷ್ಠಾನಗೊಳಿಸಲಾಗಿದೆ ಮತ್ತು ಬಾಕಿ ಪಂಪ್ ಸೆಟ್ ಗಳನ್ನು ಮಾರ್ಚ್-2026ರೊಳಗೆ ಅನುಷ್ಠಾನಗೊಳಿಸಲು ಉದ್ದೇಶಿಸಿದೆ.<br><br>• **ಕುಸುಮ್ ಸಿ ಯೋಜನೆಯ ಉದ್ದೇಶ:**<br>ರೈತರಿಗೆ ಹಗಲಿನ ವೇಳೆಯಲ್ಲಿ ವಿಶ್ವಾಸಾರ್ಹ ವಿದ್ಯುತ್ ಲಭ್ಯತೆಗಾಗಿ ಮತ್ತು ಅವರ ಜೀವನಶೈಲಿಯನ್ನು ಸುಧಾರಿಸಲು ನೀರಾವರಿ ಪಂಪ್ ಸೆಟ್‌ಗಳ ವಿಕೇಂದ್ರೀಕೃತ ಫೀಡರ್ ಸೌರೀಕರಣವನ್ನು ಕೈಗೊಂಡು ಸದರಿ ಫೀಡರ್ ನ ಕೃಷಿ ಪಂಪ್ ಸೆಟ್‌ಗಳಿಗೆ ಹಗಲಿನ ವೇಳೆಯಲ್ಲಿ ವಿದ್ಯುತ್ತನ್ನು ಸರಬರಾಜು ಮಾಡಿ ಕೃಷಿ ವಲಯವನ್ನು ಪ್ರೋತ್ಸಾಹಿಸುವ ಉದ್ದೇಶವಾಗಿರುತ್ತದೆ.<br><br>ಸದರಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ 7,63,588 ಪಂಪ್ ಸೆಟ್ ಗಳು ಹಂಚಿಕೆಯಾಗಿದ್ದು, ಸದರಿ ಪಂಪ್ ಸೆಟ್ ಗೆ ಅನುಗುಣವಾಗಿ 2767MW ಸಾಮರ್ಥ್ಯದ ಸೌರ ಯೋಜನೆಗಳಿಗೆ ಕಾರ್ಯಾದೇಶ ನೀಡಲಾಗಿದ್ದು, ದಿನಾಂಕ: 28.02.2026 ರ ಅಂತ್ಯಕ್ಕೆ 61 ಉಪಕೇಂದ್ರಗಳ ವ್ಯಾಪ್ತಿಯಲ್ಲಿ 326 ಮೆ.ವ್ಯಾ ಸಾಮರ್ಥ್ಯದ ಸೌರಘಟಕಗಳನ್ನು ಅನುಷ್ಠಾಗೊಳಿಸಲಾಗಿದೆ. ಬಾಕಿ ಸಾಮರ್ಥ್ಯದ ಯೋಜನೆಗಳು ಪ್ರಗತಿಯಲ್ಲಿದ್ದು, ಯೋಜನೆಯನ್ನು ಪೂರ್ಣಗೊಳಿಸಲು ಡಿಸೆಂಬರ್-2026ರವರೆಗೆ ಅವಧಿ ವಿಸ್ತರಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ. |

ಆ) ಪಿ.ಎಂ ಕುಸುಮ್(ಬಿ) ಯೋಜನೆಯಡಿ ರೈತರ ಪಂಪ್‌ಸೆಟ್‌ಗಳಿಗೆ ಸೋಲಾರ್ ವಿದ್ಯುತ್ ಅಳವಡಿಸಲು ಈವರೆವಿಗೂ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿದೆ; ಎಷ್ಟು ರೈತರಿಗೆ ಸೌಲಭ್ಯ ಕಲ್ಪಿಸಲಾಗಿದೆ; (ಜಿಲ್ಲಾವಾರು ವಿವರ ಒದಗಿಸುವುದು)

ಪಿ.ಎಂ ಕುಸುಮ್ ಬಿ ಯೋಜನೆಯಡಿ ಕೇಂದ್ರ ಸರ್ಕಾರದ ಹಂಚಿಕೆಗೆ ಅನುಗುಣವಾಗಿ ಸ್ವೀಕೃತಗೊಂಡ ಅರ್ಜಿಗಳು, ಅಳವಡಿಸಲಾಗಿರುವ ಪಂಪ್ ಸೆಟ್ ಗಳ ವಿವರಗಳು ಈ ಕೆಳಗಿನಂತಿದೆ:

| ಹಂಚಿಕೆ ದಿನಾಂಕ | ಹಂಚಿಕೆಯಾಗಿರವ ಪಂಪ್ ಸೆಟ್ ಗಳು | ಸ್ವೀಕೃತಗೊಂಡ ಅರ್ಜಿಗಳ ಸಂಖ್ಯೆ | ಅನುಷ್ಠಾನ ಗೊಂಡಿರುವ ಪಂಪ್ ಸೆಟ್ ಗಳು | ಷರಾ |
|---|---|---|---|---|
| 02.12.2019 | 6000 | 319 | 319 | ಮುಕ್ತಾಯಗೊಂಡಿದೆ, |
| 13.01.2021 | 10000 | 1046 | 1046 | ಮುಕ್ತಾಯಗೊಂಡಿದೆ. |
| 06.12.2023 & 20.08.2024 & 09.01.2026 | 40000 | 104060 | 4168 | ಪ್ರಗತಿಯಲ್ಲಿದೆ. ದಿನಾಂಕ 31.03.2026ರೊಳಗೆ ಪೂರ್ಣಗೊಳಿಸಬೇಕಿದೆ. |
| ಒಟ್ಟು | 56000 | 105425 | 5533 | |

ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ.

ಇ) ಈ ಯೋಜನೆಯ ಸೌಲಭ್ಯ ಪಡೆಯಲು ರೈತರು ಎಷ್ಟು ಹಣ ಪಾವತಿಸಬೇಕು; ಸರ್ಕಾರ ಎಷ್ಟು ಸಹಾಯಧನ ನೀಡುತ್ತದೆ.

ಪಿಎಮ್ ಕುಸುಮ್-ಬಿ ಯೋಜನೆಯಡಿ ರಾಜ್ಯ ಸರ್ಕಾರದ 50%, ಕೇಂದ್ರ ಸರ್ಕಾರದ 30% ಸಹಾಯಧನದೊಂದಿಗೆ ಫಲಾನುಭವಿಗಳಿಂದ ಶೇ 20 ರ ವಂತಿಗೆಯನ್ನು ಮಾತ್ರ ಪಾವತಿಸಿಕೊಂಡು ಸೋಲಾರ್ ಪಂಪ್ ಸೆಟ್ ಗಳನ್ನು ಅಳವಡಿಸಲಾಗುತ್ತಿದೆ. ಸಹಾಯಧನದ ಹಾಗೂ ಫಲಾನುಭವಿಗಳ ವಂತಿಗೆಯ ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ | ಡಿ ಸಿ ಸೌರ ಪಂಪ್ ಸಾಮರ್ಥ್ಯ | L1 ದರಗಳು ರೂ. GST ಒಳಗೊಂಡಂತೆ | ಕೇಂದ್ರ ಸರ್ಕಾರದ ಪಾಲು (30%) | ರಾಜ್ಯ ಸರ್ಕಾರದ ಪಾಲು (50%) | ಫಲಾನುಭವಿಗಳ ಪಾಲು (20%) |
|---|---|---|---|---|---|
| 1 | 3 ಎಚ್ ಪಿ ಸರ್ಫೇಸ್ | 195944 | 54696 | 97972 | 43276 |
| 2 | 3 ಎಚ್ ಪಿ ಸಬ್ಮರ್ಸಿಬಲ್ | 199047 | 54696 | 99524 | 44827 |
| 3 | 5 ಎಚ್ ಪಿ ಸರ್ಫೇಸ್ | 283985 | 84259 | 141993 | 57733 |
| 4 | 5 ಎಚ್ ಪಿ ಸಬ್ಮರ್ಸಿಬಲ್ | 285536 | 84259 | 142768 | 58509 |
| 5 | 7.5ಎಚ್ ಪಿ ಸರ್ಫೇಸ್ | 413663 | 114203 | 206832 | 92628 |
| 6 | 7.5 ಎಚ್ ಪಿ ಸಬ್ಮರ್ಸಿಬಲ್ | 392040 | 114203 | 196020 | 81817 |
| 7 | 10 ಎಚ್ ಪಿ ಸರ್ಫೇಸ್ | 513018 | 114203 | 206832 | 191983 |
| 8 | 10 ಎಚ್ ಪಿ ಸಬ್ಮರ್ಸಿಬಲ್ | 492134 | 114203 | 196020 | 181911 |

ಈ) ಈ ಯೋಜನೆಗೆ ಬಹಳ ಬೇಡಿಕೆಯಿದ್ದು, ಅರ್ಜಿ ಸಲ್ಲಿಸಲು ಅವಧಿ ಮುಕ್ತಾಯವಾಗಿದ್ದು, ಬಹಳಷ್ಟು ರೈತರು ನಿರಾಶರಾಗಿರುವುದರಿಂದ ಅರ್ಜಿ ಸಲ್ಲಿಸಲು ಮತ್ತೊಮ್ಮೆ ಅವಕಾಶ ಕಲ್ಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಯಾವಾಗ ಕಲ್ಪಿಸಲಾಗುವುದು;

ಕುಸುಮ್ ಬಿ ಯೋಜನೆಯಡಿಯಲ್ಲಿ ರಾಜ್ಯಕ್ಕೆ 2024-25 ಹಾಗೂ 2025-26 ನೇ ಸಾಲಿಗೆ ಕೇಂದ್ರ ಸರ್ಕಾರದ MNRE ರವರಿಂದ 40,000 ಸಂಖ್ಯೆಯ ಸೌರಪಂಪ್ ಸೆಟ್‌ಗಳ ಅಳವಡಿಕೆಗಾಗಿ ಮಾತ್ರ ಮಂಜೂರಾತಿ ಇರುವುದರಿಂದ ಹಾಗೂ ಈಗಾಗಲೇ 104060 ಸಂಖ್ಯೆಯ ಅರ್ಜಿಗಳು ನೋಂದಾವಣೆಯಾಗಿರುವುದರಿಂದ ಅರ್ಜಿ ಸಲ್ಲಿಕೆ ಪ್ರಕ್ರಿಯನ್ನು ಸ್ಥಗಿತಗೊಳಿಸಲಾಗಿದೆ.

ಮುಂದುವರೆದು KUSUM 2.0 ರಡಿ Component-B ಅಡಿ 2029-30ರವರೆಗೆ ಒಟ್ಟು 78,400 ಪಂಪ್ ಸೆಟ್ ಗಳಿಗೆ ಕೇಂದ್ರ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ.

ಸಂಖ್ಯೆ: ಎನರ್ಜಿ 98 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಿ.ಟಿ. ರವಿ ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1727 ಕ್ಕೆ ಅನುಬಂಧ**

| ಪಿ.ಎಂ ಕುಸುಮ್ ಬಿ ಯೋಜನೆಯಡಿ ಫೆಬ್ರುವರಿ - 2026 ರ ಅಂತ್ಯಕ್ಕೆ ಅನುಷ್ಠಾನಗೊಂಡಿರುವ ಸೌರಪಂಪ್ ಸೆಟ್ ಗಳ ಜಿಲ್ಲಾವಾರು ವಿವರ | |
|---|---|
| **DISTRICT** | **No. of SWPs** |
| **BAGALKOTE** | **126** |
| **BANGALORE RURAL** | **28** |
| **BANGALORE URBAN** | **7** |
| **BELLARY** | **23** |
| **BELAGAVI** | **521** |
| **BIDAR** | **51** |
| **CHAMARAJANAGARA** | **65** |
| **CHIKKAMAGALURU** | **374** |
| **CHIKKABALLAPURA** | **24** |
| **CHITRADURGA** | **752** |
| **DAKSHINA KANNADA** | **32** |
| **DAVANGERE** | **762** |
| **DHARWAD** | **125** |
| **GADAG** | **35** |
| **HASSAN** | **280** |
| **HAVERI** | **192** |
| **KALABURAGI** | **248** |
| **KODAGU** | **55** |
| **Kolar** | **2** |
| **KOPPAL** | **55** |
| **MANDYA** | **187** |
| **MYSURU** | **171** |
| **RAICHUR** | **135** |
| **RAMANAGARA** | **65** |
| **SHIVAMOGGA** | **554** |
| **TUMAKURU** | **262** |
| **UDUPI** | **1** |
| **UTTAR KANNADA** | **38** |
| **VIJAYANAGARA** | **77** |
| **VIJAYAPURA** | **222** |
| **YADGIR** | **64** |
| **Grand Total** | **5533** |